# ಶ್ರೀಕೃಷ್ಣಲೀಲೆ



✽ ಶ್ರೀಕೃಷ್ಣ ಸಾಕ್ಷಾತ್ ಪೂರ್ಣಬ್ರಹ್ಮ. ಆತನೂ ರಾಧಾಯಂತ್ರವನ್ನು ಹುಡುಕಿತಂದು ಲೋಕಶಿಕ್ಷಣಾರ್ಥವಾಗಿ ತಪಸ್ಸು ಮಾಡಿದ.

ಶ್ರೀಕೃಷ್ಣ ಪುರುಷ; ರಾಧೆ ಪ್ರಕೃತಿ, ಚಿಚ್ಛಕ್ತಿ — ಆದ್ಯಾಶಕ್ತಿ .

✽ ಶ್ರೀಕೃಷ್ಣ ಪ್ರೇಮದ ದೆಸೆಯಿಂದ ಬಾಗಿಬಿಟ್ಟಿದ್ದಾನೆ. ಶ್ರೀಮತಿ (ರಾಧೆ)ಯ ಪ್ರೇಮದ ದೆಸೆಯಿಂದ ಆತ ತ್ರಿಭಂಗಿಯಾಗಿಬಿಟ್ಟಿದ್ದಾನೆ ಅಂತ ಕೆಲವರು ವ್ಯಾಖ್ಯಾನ ಮಾಡುತ್ತಾರೆ. ಆತನದು ಶ್ಯಾಮವರ್ಣ; ಕಾರಣ ಗೊತ್ತೆ? ಸಮುದ್ರದ ನೀರು ದೂರದಿಂದ ಶ್ಯಾಮವರ್ಣದಂತೆ ಕಾಣುತ್ತದೆ; ಆದರೆ ಹತ್ತಿರ ಹೋಗಿ ಕೈಯಲ್ಲಿ ತೆಗೆದು ನೋಡಿದರೆ, ಅದು ಶ್ಯಾಮವರ್ಣದಂತೆ ಕಾಣುವುದಿಲ್ಲ. ಬಹಳ ಸ್ವಚ್ಛ ಸಲಿಲವಾಗಿ ಕಾಣುತ್ತದೆ. ಅದೇ ರೀತಿ ನಾವು ಭಗವಂತನಿಂದ ಬಹುದೂರದಲ್ಲಿ ಇರುವಾಗ ಆತ ಶ್ಯಾಮವರ್ಣದವನಾಗಿ ಕಾಣುತ್ತಾನೆ. ಆತ ಕುಳ್ಳ — ಆತನ ಎತ್ತರ ಅವನ ಪುಟ್ಟ ಕೈಗಳ ಅಳತೆಯಲ್ಲಿ ಮೂರೂವರೆ ಮೊಳ ಮಾತ್ರ — ಕಾರಣ ಗೊತ್ತೆ? ಸೂರ್ಯ ಬಹಳ ದೂರದಲ್ಲಿರುವುದರಿಂದ ಬಹಳ ಚಿಕ್ಕದಾಗಿ ಕಾಣುತ್ತಾನೆ. ಆದರೆ ಹತ್ತಿರ ಹೋಗಿ ನೋಡಿದರೆ ಆತ ಚಿಕ್ಕದಾಗಿ ಕಾಣುವ ಹಾಗೇ ಇಲ್ಲ. ಭಗವಂತನ ಸ್ವರೂಪವನ್ನು ಸರಿಯಾಗಿ ಅರಿತುಕೊಂಡಾಗ ಆತ ಶ್ಯಾಮವರ್ಣದವನಾಗಿಯೂ ಕಾಣುವುದಿಲ್ಲ, ಕುಳ್ಳಾಗಿಯೂ ತೋರುವುದಿಲ್ಲ. ಅದು ಬಹುದೂರದ ಮಾತು; ಸಮಾಧಿಸ್ಥನಾಗದ ಹೊರತು ಆ ಅನುಭವ ದೊರೆಯದು. ಎಲ್ಲಿಯವರೆಗೆ 'ನಾನು', 'ನೀನು' ಎಂಬ ಭಾವನೆ ಹೃದಯದಲ್ಲಿ ಇರುವುದೊ, ಅಲ್ಲಿಯವರೆಗೆ ಆತ ನಮಗೆ ನಾಮರೂಪಗಳಿಂದ ಕಾಣಿಸಿಕೊಳ್ಳುತ್ತಾನೆ.

✽ ಶ್ರೀಕೃಷ್ಣ ಪುರುಷ; ಶ್ರೀಮತಿ ಆತನ ಶಕ್ತಿ — ಆದ್ಯಾಶಕ್ತಿ. ಪುರುಷ ಮತ್ತು ಪ್ರಕೃತಿ. ಯುಗಲಮೂರ್ತಿ ಎಂದರೆ ಅರ್ಥವೇನು? ಪುರುಷನಿಗೂ ಪ್ರಕೃತಿಗೂ ಅಭೇದ ಅಂತ; ಅವರಿಬ್ಬರಿಗೂ ಯಾವ ಭೇದವೂ ಇಲ್ಲ ಅಂತ. ಪ್ರಕೃತಿರಹಿತನಾಗಿ ಪುರುಷನಿರಲಾರ; ಪುರುಷರಹಿತಳಾಗಿ ಪ್ರಕೃತಿಯಿರಲಾರಳು. ಒಂದನ್ನು ಪ್ರಸ್ತಾಪಿಸಿತು ಅಂದರೆ ಅದರೊಡನೆಯೇ ಮತ್ತೊಂದು ಇರುವುದನ್ನೂ ಭಾವಿಸಲೇಬೇಕು. ಇದು ಅಗ್ನಿ ಮತ್ತು ಅದರ ದಾಹಕ ಶಕ್ತಿಯ ಹಾಗೆ, ಅಗ್ನಿಯನ್ನು ಬಿಟ್ಟು ದಾಹಕಶಕ್ತಿಯನ್ನು ಭಾವಿಸುವುದಕ್ಕೆ ಆಗುವುದಿಲ್ಲ. ಅದಕ್ಕಾಗಿಯೇ ಯುಗಲ ಮೂರ್ತಿಯಲ್ಲಿ ಶ್ರೀಕೃಷ್ಣನ ದೃಷ್ಟಿ ರಾಧೆಯ ಕಡೆಗೆ ಇರುವುದು, ರಾಧೆಯ ದೃಷ್ಟಿ ಶ್ರೀಕೃಷ್ಣನ ಕಡೆಗೆ ಇರುವುದು. ಶ್ರೀಮತಿಯದು ವಿದ್ಯುತ್ತಿನೋಪಾದಿಯ ಗೌರವರ್ಣ; ಅದಕ್ಕಾಗಿಯೇ ಶ್ರೀಕೃಷ್ಣ ಪೀತಾಂಬರ ಉಡುವುದು. ಶ್ರೀಕೃಷ್ಣನ ವರ್ಣ ನೀಲಮೇಘದ ವರ್ಣ; ಅದಕ್ಕಾಗೇ ಶ್ರೀಮತಿ ನೀಲಾಂಬರ ಉಡುವುದು. ನೀಲರತ್ನಗಳಿಂದ ಅಂಗಾಂಗಗಳನ್ನು ಸಿಂಗರಿಸಿಕೊಳ್ಳುವುದು. ಶ್ರೀಮತಿ ಕಾಲಿಗೆ ಗೆಜ್ಜೆ ಕಟ್ಟುತ್ತಾಳೆ; ಅದಕ್ಕಾಗೇ ಶ್ರೀಕೃಷ್ಣನೂ ಕಾಲಿಗೆ ಗೆಜ್ಜೆ ಕಟ್ಟುತ್ತಾನೆ. ಅಂದರೆ ಪ್ರಕೃತಿಪುರುಷರಲ್ಲಿ ಆಂತರಿಕವಾಗಿ ಬಾಹ್ಯವಾಗಿ ಸಂಪೂರ್ಣ ಸಾಮರಸ್ಯವಿದೆ ಎಂದು.

✽ ಶ್ರೀಕೃಷ್ಣನ ತಲೆಯ ಮೇಲೆ ನವಿಲಿನ ಗರಿ ಇದೆ. ಆ ಗರಿಯಲ್ಲಿ ಯೋನಿಯ ಚಿಹ್ನೆ ಇದೆ — ಅಂದರೆ ಶ್ರೀಕೃಷ್ಣ ಪ್ರಕೃತಿಯನ್ನು ತನ್ನ ತಲೆಯ ಮೇಲೆ ಹೊತ್ತುಕೊಂಡಿದ್ದಾನೆ ಎಂದರ್ಥವಾಗುತ್ತದೆ. ಶ್ರೀಕೃಷ್ಣ ರಾಸಮಂಡಲಿಗೆ ಹೋದ. ಆದರೆ, ಅಲ್ಲಿ ತಾನೇ ಪ್ರಕೃತಿಯಾದ. ಅದಕ್ಕಾಗಿಯೆ ನೋಡು, ರಾಸಮಂಡಲಿಯಲ್ಲಿ ಆತ ಹೆಂಗಸಿನ ವೇಷವನ್ನು ಧರಿಸಿರುವುದು. ಪ್ರಕೃತಿಭಾವೋಪಪನ್ನನಾಗದೆ ಇದ್ದರೆ, ಪ್ರಕೃತಿಯ ಸಂಗದ ಅಧಿಕಾರಿಯಾಗಲಾರ. ಪ್ರಕೃತಿಭಾವ ಸಂಪನ್ನನಾದರೆ ಆಗ ಕ್ರೀಡೆ, ಆಗ ಆನಂದ.

✽ ಶ್ರೀಕೃಷ್ಣ ಅರ್ಜುನನಿಗೆ ಹೇಳಿದ, 'ನೀನು ನನ್ನನ್ನು ಭಗವಂತನ ಅವತಾರ ಅಂತ ಕರೆಯುತ್ತಿದ್ದೀಯೆ. ನಿನಗೊಂದು ದೃಶ್ಯ ತೋರಿಸುತ್ತೇನೆ ಬಾ ನೋಡುವೆಯಂತೆ.' ಅರ್ಜುನ ಆತನ ಹಿಂದೆಯೇ ಹೋದ. ಸ್ವಲ್ಪ ದೂರ ಮುಂದುವರಿದ ನಂತರ ಶ್ರೀಕೃಷ್ಣ ಅರ್ಜುನನನ್ನು ಕೇಳಿದ, 'ಅಗೋ, ಅಲ್ಲಿ ನಿನಗೇನು ಕಾಣುತ್ತಿದೆ?' ಅರ್ಜುನ ಹೇಳಿದ, 'ಒಂದು ದೊಡ್ಡ ಮರ ಕಾಣುತ್ತಿದೆ; ಅದರಲ್ಲಿ ನೇರಳೆ ಹಣ್ಣುಗಳು ಗೊಂಚಲು ಗೊಂಚಲಾಗಿ ನೇತಾಡುತ್ತಿವೆ.' ಶ್ರೀಕೃಷ್ಣ ಹೇಳಿದ, 'ಅವು ನೇರಳೆ ಹಣ್ಣುಗಳಲ್ಲ ; ಹತ್ತಿರ ಹೋಗಿ ನೋಡು.' ಅರ್ಜುನ ಹತ್ತಿರ ಹೋಗಿ ನೋಡುತ್ತಾನೆ! ಅವೆಲ್ಲ ಕೇವಲ ಶ್ರೀಕೃಷ್ಣರ ಗೊಂಚಲುಗಳು! ಆಗ ಶ್ರೀಕೃಷ್ಣ ಹೇಳಿದ, 'ಈಗ ನೋಡಿದೆಯಾ, ಅಲ್ಲಿ ನನ್ನಂಥ ಶ್ರೀಕೃಷ್ಣರು ಎಷ್ಟೊಂದು ಜನ ಇದ್ದಾರೆ ಎಂಬುದನ್ನು?'

✽ ಕಾಣುವುದಿಲ್ಲವೆ, ಭಗವಂತ ಯಾರ ಮನೆಯಲ್ಲಿ ಅವತರಿಸಿದನೊ, ಆ ಮನೆಯವರು ಅತ್ಯಂತ ಸರಳರಾಗಿದ್ದುದು? ದಶರಥ ಎಷ್ಟು ಸರಳ ! ನಂದ — ಶ್ರೀಕೃಷ್ಣನ ತಂದೆ ಎಂಥ ಸರಳ ಜೀವಿ! ಜನ ಹೇಳುವುದುಂಟು: 'ಆಹಾ ಈತನೆಷ್ಟು ಸರಳ! ಈತ ನಂದಗೋಪನೇ.'

ಶ್ರೀರಾಮಕೃಷ್ಣ ವಚನವೇದದಿಂದ